ತೀವ್ರ ಪರಿಶೀಲನೆಯಲ್ಲಿ ಇದೆ. ಈ ತಿದ್ದುಪಡಿಯನ್ನು ಬೇಗ ಮಾಡುವ ಬಗ್ಗೆ ಭರವಸೆ ಕೊಡುತ್ತೇನೆ, ಆದರೆ ಮಾನ್ಯ ಆಚಾರ್ ಅವರು ಹೇಳಿದರು ಆ ಬಗ್ಗೆ ಹೇಳಬೇಕೆಂದರೆ, ಅಲ್ಲಿ ಪ್ರಯಾಣಿಕರನ್ನು ಬಸ್ ಸ್ಟಾಂಡ್‌ಗಳಿಂದ ಕೂರಿಸಿಕೊಂಡು ಹೋಗತಕ್ಕ ಪರಿಪಾಠವನ್ನು ಬಿಡಬೇಕಾಗುತ್ತದೆ. ಸರ್ಕಾರಿ ಬಸ್ ನಿಲ್ದಾಣದ ಹತ್ತಿರ ಪ್ರಯಾಣಿಕರನ್ನು ಇವರು ಕೂರಿಸಿಕೊಂಡು ಹೋಗುವುದು ತಪ್ಪಾಗುತ್ತದೆ. ಅಷ್ಟೇ ಅಲ್ಲದೇ ಇವರು ಆ ಸೀಟ್‌ಗಳಲ್ಲಿ ಜನರನ್ನು ಕೂರಿಸಿಕೊಂಡು ಹೋಗುವಾಗ ಯಾರು ಯಾರನ್ನು ಹಾಗೂ ಯಾವ ಪರ್ಪಸ್‌ಗೆ ಕರೆದುಕೊಂಡು ಹೋಗಲಾಗುತ್ತಿದೆ ಎಂಬುದನ್ನು ಸಹಾ ಬರೆದು ಇಡಬೇಕಾಗುತ್ತದೆ. ಹಾಗೂ ಇದರಲ್ಲಿ ಹೆಚ್ಚು ಜನರು ಹೋಗುವುದಕ್ಕಾಗುವುದಿಲ್ಲ. ಇದನ್ನೆಲ್ಲಾ ಅವರು ಗಮನದಲ್ಲಿ ಇಡಬೇಕಾಗುತ್ತದೆ. ಹಾಗೂ ಮಾನ್ಯ ಸದಸ್ಯರು ಏನು 12 ಪ್ಲಸ್ 1 ಪ್ರಯಾಣಿಕರನ್ನು ಕರೆದುಕೊಂಡು ಹೋಗಬೇಕೆಂದು ಹೇಳಿದ್ದಾರೆ; ಅದೆನ್ನು ಕೂಡಲೇ ಜಾರಿಗೆ ತರುವ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆಮಾಡಿ ಕ್ರಮ ಕೈಗೊಳ್ಳುತ್ತದೆನ್ನುವ ಭರವಸೆಯನ್ನು ಈ ಸದನದಲ್ಲಿ ಕೊಡುತ್ತೇನೆ.

ಶ್ರೀ ವಿ. ಎಸ್. ಆಚಾರ್ಯ.— ಇದು ನಿನ್ನೆ ಮೊನ್ನೆ ಬಂದ ಕಾನೂನಲ್ಲ. ಹಿಂದಿನ ಸರ್ಕಾರವೇ 6 ಸೀಟ್‌ಗಳಿಗೆ ಅನುಮತಿ ಕೊಟ್ಟಿತ್ತು. ಇನ್ನು ಅಲ್ಲಿ ಹೆಡ್ ರೆಸ್ಪ್ ಹಾಗೂ ಇನ್ನಿತರ ಸಲಕರಣೆಗಳನ್ನು ಹಾಕಿಕೊಳ್ಳಬೇಕೆಂದು ಅವರಿಗೆ ಉಪದ್ರವ ಕೊಡುತ್ತಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್.—ಕಾನೂನು ರೀತ್ಯ ಅವರು ನಡೆದುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಆ ಬಗ್ಗೆ ನಾನು ಏನನ್ನೂ ಸದನದಲ್ಲಿ ಹೇಳಲು ಇಷ್ಟಪಡುವುದಿಲ್ಲ. ಈಗಿರುವ ಕಾನೂನಿನ ಚೌಕಟ್ಟನ್ನು ಮೀರಿ ಅವರು ನಡೆದುಕೊಳ್ಳಬಾರದು. ಕೆಲವರು ಈ ಬಗ್ಗೆ ಕಾನೂನು ರೀತ್ಯ ನಡೆದುಕೊಳ್ಳುತ್ತಿದ್ದಾರೆ. ಹಾಗೂ ಮಾನ್ಯ ಸದಸ್ಯರು ಹೇಳಿದ್ದರ ಬಗ್ಗೆ ನಾನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ.

20. ವಿಷಯ : ವರಾಹಿ ಯೋಜನಾ ಪ್ರದೇಶದ ರೈತರಿಗೆ ಪರಿಹಾರ ಧನ ಮಂಜೂರಾತಿಯ ಬಗ್ಗೆ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆ ವರಾಹಿ ಯೋಜನೆಯಲ್ಲಿ ಪರಿಹಾರ ನೀಡುವಾಗ 1983–84ನೇ ಸಾಲಿನ ಸರ್ಕಾರಿ ಆಜ್ಞೆ ಪ್ರಕಾರ ಹಿಡುವಳಿಯಲ್ಲಿ ಬರುವ ಖಾಸಗಿ, ಭೂಮಿ, ಮನೆ ಹೊಂದಿದ ರೈತರಿಗೆ ಯಾವ "ಡಿಪ್ರಿಸಿಯೇಷನ್" ಕಳೆದಿರುವುದಿಲ್ಲ. ಸರ್ಕಾರಿ ಒತ್ತುವರಿ ಭೂಮಿಗೆ ಮತ್ತು ಸರ್ಕಾರಿ ಜಾಗದಲ್ಲಿರುವ ಮನೆಗಳಿಗೆ ಶೇಕಡಾ 10ರಷ್ಟು ಡಿಪ್ರಿಸಿಯೇಷನ್ ಕಳೆಯುತ್ತಾರೆ. ಆದರೆ 1979–80ರಲ್ಲಿ ಪರಿಹಾರ ಪಡೆದ ಖಾಸಗಿ ಭೂಮಿ, ಮನೆ ಕಳೆದುಕೊಂಡ ರೈತರಿಗೆ ಶೇಕಡಾ 15ರಷ್ಟು ಡಿಪ್ರಿಸಿಯೇಷನ್ ಕಳೆದಿರುತ್ತಾರೆ. ಕೇವಲ 1983–84ರ ಆಜ್ಞೆ ಹೊರಡುವ ಒಂದು ತಿಂಗಳ ಹಿಂದಿನ ಅವಧಿಯಲ್ಲಿ ಪರಿಹಾರ ಪಡೆದ ರೈತರಿಗೆ ಈ ಆಜ್ಞೆಯು ಅನುಕೂಲವಾಗದೆ ಅನ್ಯಾಯವಾಗಿದೆ. ಆದ್ದರಿಂದ "ವರಾಹಿ ಯೋಜನೆ"ಯ 1983–84ರ ಪರಿಹಾರ ಆಜ್ಞೆಯನ್ನು ಹಿಂದಿನ ಐದು ವರ್ಷದಿಂದ ಜಾರಿ ಆಗುವ ಹಾಗೆ ಸದನದಲ್ಲಿ ಪ್ರಸ್ತಾಪಿಸಿ ಸರ್ಕಾರದ, ಸದನದ ಗಮನವನ್ನು ಸೆಳೆಯಲು ಬಯಸುತ್ತೇನೆ. ಮತ್ತು ಈ ರೀತಿಯ ಸಣ್ಣಪುಟ್ಟ ಕುಂದುಕೊರತೆಗಳನ್ನು ಸರಿಪಡಿಸುವುದಕ್ಕೋಸ್ಕರ ಹೈಪವರ್ ಕಮಿಟಿ ಮಾಡಬೇಕೆಂದು ಹಿಂದೆ ಕೇಳಿಕೊಂಡಿದ್ದೆ. ಆದರೆ ಆ ಬಗ್ಗೆ ಸರ್ಕಾರ ಯಾವುದೇ ಕಾನೂನು ಮಾಡಿಲ್ಲ. ಆದ್ದರಿಂದ, ಇದೂ ಕೂಡಾ ಶರಾವತಿ ಕರ್ಮಕಾಂಡದ ರೀತ್ಯ ಆಗಬಹುದು ಎಂದು ನಾನು ತಿಳಿದುಕೊಂಡು ಈ ಬಗ್ಗೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಸಭಾಪತಿಗಳೇ, ಸರ್ಕಾರಿ ಆಜ್ಞೆಯಲ್ಲಿ ಈಗಿನದಕ್ಕೂ ಮತ್ತು ಹಿಂದಿನದಕ್ಕೂ ವ್ಯತ್ಯಾಸ ಇದೆ. ಈ ಬಗ್ಗೆ ಸರ್ಕಾರಿ ಆಜ್ಞೆಯನ್ನು ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ ಇದರ ಬಗ್ಗೆ ಹಿಂದೆಮುಂದೆ ನೋಡಿ ಏನು ಪರಿಣಾಮ ಆಗುತ್ತದೆ ಎಂಬುದನ್ನು ನೋಡದೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ರೆವಿನ್ಯೂ ಅಧಿಕಾರಿಗಳಿಗೆ ಇದನ್ನು ಹೇಳಿ, ಇದನ್ನು ಪರಿಶೀಲನೆ ಮಾಡಿ ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ನಾನು ಹೇಳುತ್ತೇನೆ.

Legislative Business

The Karnataka Appropriation (No.3) Bill 1984.
(Leave to introduce)

Mr. Deputy Speaker.— I have received the recommendation from the Governor for introduction of the Karnataka Appropriation (No. 3) Bill, 1984. The Hon. Chief Minister may please move the Motion.